**ಕರ್ನಾಟಕ ಸರಕಾರ**

**ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ರೋಣ.**

ಕ್ರ,ಸಂ:ಶಿಅಯೋರೋ/ಅಂ,ಕಾ,ಕ/ಅಂ.ಸ/ಪ್ರಕಟಣೆ/2026-27 ದಿನಾಂಕ : 22-06-2026

## :ಅಧಿಸೂಚನೆ:

ಸರಕಾರದ ಆದೇಶ ಸಂ:ಮಮಅಇ/154/ಐಸಿಡಿ/2020 ಬೆಂಗಳೂರು ದಿ:03-12-2022ರ ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರ ನೇಮಕಾತಿಯ ಪರಿಷ್ಕೃತ ಮಾರ್ಗಸೂಚಿಯಂತೆ ಹಾಗೂ ಮಾರ್ಪಾಡು ಆದೇಶ ಸಂಖ್ಯೆ:ಮಮಇ 154 ಐಸಿಡಿ 2020, ದಿನಾಂಕ:18.11.2024ರ ಆದೇಶದಂತೆ ಅಂಗನವಾಡಿ ಕಾರ್ಯಕರ್ತೆ ಹಾಗೂ ಸಹಾಯಕಿಯರ ಆಯ್ಕೆ ಪ್ರಕ್ರಿಯೆಯನ್ನು ಆಫ್ ಲೈನ್ ಮೂಲಕ ಕೈಗೊಳ್ಳಲು ಪತ್ರ ಸಂಖ್ಯೆ:ಡಿಡಬ್ಲೂಸಿ/ಐಸಿಡಿ/ಎಎನ್‌ಜಿ-1/2026-27 ದಿನಾಂಕ:04.05.2026 ಮಾರ್ಗದರ್ಶನದಂತೆ ಮತ್ತು ಮಾನ್ಯ ಜಿಲ್ಲಾಧಿಕಾರಿಗಳು, ಗದಗ ಇವರ ಕಡತ ಕಂಡಿಕೆ 04 ದಿನಾಂಕ:16.06.2026ರ ಅನುಮೋದನೆಯಂತೆ ಒಂದು ಬಾರಿಗೆ ಆಫ್ ಲೈನ್ (ಭೌತಿಕ) ಅರ್ಹ ಮಹಿಳೆಯರ ಹಾಗೂ ಲಿಂಗತ್ವ ಅಲ್ಪ ಸಂಖ್ಯಾತರ ಮಹಿಳಾ ಅಭ್ಯರ್ಥಿಗಳಿಂದ ರೋಣ ತಾಲ್ಲೂಕಿನ ಖಾಲಿ ಇರುವ ಅಂಗನವಾಡಿ ಕಾರ್ಯಕರ್ತೆ 09 ಹುದ್ದೆ (ಅನುಬಂಧ-1) ಹಾಗೂ ಅಂಗನವಾಡಿ ಸಹಾಯಕಿಯರ 27 ಹುದ್ದೆ (ಅನುಬಂಧ-2)ರ ಗೌರವಸೇವೆ ಆಧಾರದ ಮೇಲೆ ಭರ್ತಿ ಮಾಡಲು ಅಧಿಸೂಚನೆ ಹೊರಡಿಸಲಾಗಿದೆ. ಆಯ್ಕೆ ಪ್ರಕ್ರಿಯೆಯು ಸರ್ಕಾರದ/ನಿರ್ದೇಶನಾಲಯದಿಂದ ಕಾಲಕಾಲಕ್ಕೆ ಸ್ವೀಕೃತವಾಗುವ ಸಲಹೆ, ಸೂಚನೆ, ಮಾರ್ಗದರ್ಶನ ಹಾಗೂ ಆದೇಶಗಳ ನಿರ್ಬಂಧಕ್ಕೆ ಒಳಪಟ್ಟಿರುತ್ತದೆ.

| | |
|---|---|
| ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಪ್ರಾರಂಭದ ದಿನಾಂಕ | 22-06-2026 ಬೆಳಿಗ್ಗೆ:10.30 ಗಂಟೆಯಿಂದ ಪ್ರಾರಂಭವಾಗಿ |
| ಅರ್ಜಿ ಸಲ್ಲಿಸಲು ನಿಗದಿಪಡಿಸಿದಿ ಕೊನೆಯ ದಿನಾಂಕ | 30-07-2026 ಸಾಯಂಕಾಲ: 5.30ಗಂಟೆಯ ವರೆಗೆ |
| ಅರ್ಜಿ ಸಲ್ಲಿಸುವ ಸ್ಥಳ & ವಿಳಾಸ | ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಕಛೇರಿ, ಎ.ಎಮ್ ಸಾಣಿ ಕಟ್ಟಡ ಗದಗ ರಸ್ತೆ ರೋಣ |

### ಅನುಬಂಧ-1

ರೋಣ ತಾಲೂಕಿನ ಶಿಶು ಅಭಿವೃದ್ಧಿ ಯೋಜನೆಯಲ್ಲಿ ಖಾಲಿ ಇರುವ ಅಂಗನವಾಡಿ ಕಾರ್ಯಕರ್ತೆಯರ ಗೌರವ ಸೇವೆಯ ಹುದ್ದೆಯ ವಿವರ

| ಕ್ರಸಂ | ಅಂಗನವಾಡಿ ಕೇಂದ್ರದ ಹೆಸರು | ಕೇಂದ್ರ ಸಂಖ್ಯೆ | ಪುರಸಭೆ/ಪಟ್ಟಣ ಪಂಚಾಯತ/ಪಂಚಾಯತ | ವಾರ್ಡ ಸಂಖ್ಯೆ | ಮೀಸಲಾತಿ |
|---|---|---|---|---|---|
| 01 | ಕಳಕಾಪುರ | 108 | ಇಟಗಿ | - | ಇತರೆ |
| 02 | ಯಾವಗಲ್ | 06 | ಯಾವಗಲ್ | - | ಇತರೆ |
| 03 | ಬೆಳವಣಕಿ | 39 | ಬೆಳವಣಕಿ | - | ಎಸ್.ಸಿ |
| 04 | ಹೊಳೆ ಆಲೂರ | 56 | ಹೊಳೆ ಆಲೂರ | - | ಇತರೆ |
| 05 | ಬೆನಹಾಳ | 74 | ಹುನಗುಂಡಿ | - | ಇತರೆ |
| 06 | ಅಬ್ಬಿಗೇರಿ | 137 | ಅಬ್ಬಿಗೇರಿ | - | ಇತರೆ |
| 07 | ಅಬ್ಬಿಗೇರಿ | 139 | ಅಬ್ಬಿಗೇರಿ | - | ಇತರೆ |
| 08 | ಅಬ್ಬಿಗೇರಿ | 141 | ಅಬ್ಬಿಗೇರಿ | - | ಇತರೆ |
| 09 | ಹೊಸರಾಂಪುರ | 219 | ರಾಂಪೂರ | - | ಇತರೆ |



Scanned with CamScanner

**ಅನುಬಂಧ-2**

ರೋಣ ತಾಲೂಕಿನ ಶಿಶು ಅಭಿವೃದ್ಧಿ ಯೋಜನೆಯಲ್ಲಿ ಖಾಲಿ ಇರುವ ಅಂಗನವಾಡಿ ಸಹಾಯಕಿಯರ ಗೌರವ ಸೇವೆಯ ಹುದ್ದೆಗಳ ವಿವರ

| ಕ್ರಸಂ | ಅಂಗನವಾಡಿ ಕೇಂದ್ರದ ಹೆಸರು | ಕೇಂದ್ರ ಸಂಖ್ಯೆ | ಪುರಸಭೆ/ಪಟ್ಟಣ ಪಂಚಾಯತ/ಪಂಚಾಯತ | ವಾರ್ಡ ಸಂಖ್ಯೆ | ಮೀಸಲಾತಿ |
|---|---|---|---|---|---|
| 01 | ಮಲ್ಲಾಪೂರ | 46 | ಮಲ್ಲಾಪೂರ | – | ಇತರೆ |
| 02 | ಹಾಲಕೇರಿ | 285 | ಹಾಲಕೇರಿ | – | ಇತರೆ |
| 03 | ನರೇಗಲ್ | 129 | ನರೇಗಲ್ | 7 & 8 | ಇತರೆ |
| 04 | ಗಜೇಂದ್ರಗಡ | 171 | ಗಜೇಂದ್ರಗಡ | 21 | ಎಸ್.ಸಿ |
| 05 | ಗಜೇಂದ್ರಗಡ | 181 | ಗಜೇಂದ್ರಗಡ | 1 | ಇತರೆ |
| 06 | ಗಜೇಂದ್ರಗಡ | 170 | ಗಜೇಂದ್ರಗಡ | 14 | ಇತರೆ |
| 07 | ಗಜೇಂದ್ರಗಡ | 174 | ಗಜೇಂದ್ರಗಡ | 10 | ಎಸ್.ಸಿ |
| 08 | ಗಜೇಂದ್ರಗಡ | 175 | ಗಜೇಂದ್ರಗಡ | 11 | ಇತರೆ |
| 09 | ಮಾಳವಾಡ | 65 | ಕೌಜಗೇರಿ | – | ಇತರೆ |
| 10 | ಹುಲ್ಲೂರು | 70 | ಹುಲ್ಲೂರು | – | ಇತರೆ |
| 11 | ಸೋಮನಕಟ್ಟಿ | 68 | ಹುಲ್ಲೂರು | – | ಇತರೆ |
| 12 | ಕಳಕಾಪೂರ | 108 | ಇಟಗಿ | – | ಇತರೆ |
| 13 | ನಾಗರಸಿಕೊಪ್ಪ ತಾಂಡ | 218 | ಗೋಗೇರಿ | – | ಎಸ್.ಸಿ |
| 14 | ಮಾಟರಂಗಿ | 190 | ಗೋಗೇರಿ | – | ಇತರೆ |
| 15 | ಹುಲ್ಲೂರು | 71 | ಹುಲ್ಲೂರು | – | ಇತರೆ |
| 16 | ಹುಲ್ಲೂರು | 295 | ಹುಲ್ಲೂರು | – | ಇತರೆ |
| 17 | ಮೆಣಸಗಿ | 245 | ಮೆಣಸಗಿ | – | ಇತರೆ |
| 18 | ರೋಣ | 14 | ರೋಣ | 17 | ಇತರೆ |
| 19 | ಗಜೇಂದ್ರಗಡ | 185 | ಗಜೇಂದ್ರಗಡ | 07 | ಇತರೆ |
| 20 | ಗುಜಮಾಗಡಿ | 261 | ಗುಜಮಾಗಡಿ | – | ಇತರೆ |
| 21 | ದ್ಯಾಮಹುಣಸಿ | 166 | ಸೂಡಿ | – | ಇತರೆ |
| 22 | ಹಾಲಕೇರಿ | 106 | ಹಾಲಕೇರಿ | – | ಇತರೆ |
| 23 | ಬೂದಿಹಾಳ | 116 | ಬೂದಿಹಾಳ | – | ಇತರೆ |
| 24 | ಅಬ್ಬಿಗೇರಿ | 139 | ಅಬ್ಬಿಗೇರಿ | – | ಇತರೆ |
| 25 | ಅಬ್ಬಿಗೇರಿ | 140 | ಅಬ್ಬಿಗೇರಿ | – | ಇತರೆ |
| 26 | ಯಾವಗಲ್ | 43 | ಯಾವಗಲ್ | – | ಇತರೆ |
| 27 | ಬೆಳವಣಿಕಿ | 37 | ಬೆಳವಣಿಕಿ | – | ಇತರೆ |

**ಈ ಕೆಳಗಿನ ಮಾರ್ಗಸೂಚಿ ನಿಬಂಧನೆಗಳಲ್ಲಿ ತಿಳಿಸಿದಂತೆ ಅರ್ಹ ಮಹಿಳೆಯರು ಹಾಗೂ ಲಿಂಗತ್ವ, ಅಲ್ಪಸಂಖ್ಯಾತ ಮಹಿಳಾ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.**

**ಸೂಚನೆಗಳು:**

1. ಅಂಗನವಾಡಿ ಕಾರ್ಯಕರ್ತೆ ಹಾಗೂ ಅಂಗನವಾಡಿ ಸಹಾಯಕಿಯರ ಹುದ್ದೆಗಳಿಗೆ ಅರ್ಜಿಯನ್ನು ಭೌತಿಕವಾಗಿ ಸಲ್ಲಿಸಬಹುದಾಗಿದೆ. ಅರ್ಜಿಯನ್ನು ಇತರೆ ಯಾವುದೇ ಮೂಲದಿಂದ (ಅಂಚೆ/ಕೋರಿಯರ್) ಸಲ್ಲಿಸಲು ಅವಕಾಶ ಇರುವುದಿಲ್ಲ ಹಾಗೂ ಅವುಗಳನ್ನು ಪರಿಗಣಿಸಲಾಗುವುದಿಲ್ಲ.
2. ಅಭ್ಯರ್ಥಿಗಳು ಅರ್ಜಿ ಸಲ್ಲಿಸುವ ಮೊದಲು ಅರ್ಜಿ ನಮೂನೆಯೊಂದಿಗೆ ಲಗತ್ತಿಸಿದ ನೇಮಕಾತಿ/ನಿಬಂಧನೆಗಳನ್ನು ಸ್ಪಷ್ಟವಾಗಿ ಓದಿಕೊಂಡು ನೀಡಲಾಗಿರುವ ಸೂಚನೆಯಂತೆ ಭರ್ತಿ ಮಾಡಿ ಅವಶ್ಯಕ ದಾಖಲೆಗಳನ್ನು ಪತ್ರಾಂಕಿತ/ಗೆಜೆಟೆಡ್ ಅಧಿಕಾರಿಯವರಿಂದ ದೃಢೀಕರಿಸಿ ಅರ್ಜಿಯೊಂದಿಗೆ ಸಲ್ಲಿಸುವುದು. ದೃಢೀಕರಣ ಇಲ್ಲದೆ ದಾಖಲೆಗಳನ್ನು ಪರಿಗಣಿಸಲಾಗುವುದಿಲ್ಲ.



Scanned with CamScanner

ಅರ್ಜಿಗಳನ್ನು ಸೀಲ್ ಮಾಡಿದ ಲಕೋಟೆಯಲ್ಲಿ ಕಛೇರಿ ಕೆಲಸದ ವೇಳೆ ದಿನಾಂಕ: 30-07-2026 ಸಾಯಂಕಾಲ 05:30 ಗಂಟೆ ಒಳಗಾಗಿ ಶಿಶು ಅಭಿವೃದ್ಧಿ ಯೋಜನಾ ಕಛೇರಿ ಅರ್ಜಿ ಸ್ವೀಕೃತ ವಹಿಯಲ್ಲಿ (ರಜಿಸ್ಟರ್) ತಮ್ಮ ಹೆಸರನ್ನು ದಾಖಲಿಸಿ, ತಮ್ಮ ಅರ್ಜಿಯನ್ನು ಸಂಬಂಧಿಸಿದ ಹುದ್ದೆಯ ಹೆಸರನ್ನು ದಪ್ಪ ಅಕ್ಷರಗಳಲ್ಲಿ ಅಂಗನವಾಡಿ ಕಾರ್ಯಕರ್ತೆ ಅಥವಾ ಅಂಗನವಾಡಿ ಸಹಾಯಕಿ ಹುದ್ದೆಗೆಂದು ಸ್ಪಷ್ಟವಾಗಿ ನಮೂದಿಸಿ ಸಂಬಂಧಿಸಿದ ಬಾಕ್ಸನಲ್ಲಿ ಹಾಕುವುದು. ಹಾಗೂ ನಿಗದಿತ ಅವಧಿ ಮೀರಿ ಬಂದ ಯಾವುದೇ ದಾಖಲಾತಿಗಳನ್ನು ಸ್ವೀಕರಿಸುವುದಿಲ್ಲ ಹಾಗೂ ಆಯ್ಕೆಗೆ ಪರಿಗಣಿಸುವುದಿಲ್ಲ.

**ಹೆಚ್ಚಿನ ಮಾಹಿತಿಗಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿಯನ್ನು, ಕಛೇರಿ ಅವಧಿಯಲ್ಲಿ ಸಂಪರ್ಕಿಸಬಹುದಾಗಿದೆ.**

| ಕ್ರಸಂ | ತಾಲ್ಲೂಕು | ಕಛೇರಿ ವಿಳಾಸ | ದೂರವಾಣಿ ಸಂಖ್ಯೆ |
|---|---|---|---|
| 01 | ರೋಣ | ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ ಎ.ಎಮ್ ಸಾಣೆ ಕಟ್ಟಡ ಗದಗ, ರಸ್ತೆ ರೋಣ. | 08381-267270 |

**ಪ್ರತಿಯನ್ನು ಗೌರವಪೂರ್ವಕವಾಗಿ ಮಾಹಿತಿಗಾಗಿ ಸಲ್ಲಿಸಲಾಗಿದೆ.**

1. ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರ ಆಯ್ಕೆ ಸಮಿತಿ ಗದಗ ಜಿಲ್ಲೆ
2. ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ ಗದಗ ಹಾಗೂ ಸಹ ಅಧ್ಯಕ್ಷರು, ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರ ಆಯ್ಕೆ ಸಮಿತಿ ಗದಗ ಜಿಲ್ಲೆ
3. ಮಾನ್ಯ ಆಯುಕ್ತರು ಗದಗ-ಬೆಟಗೇರಿ ನಗರಸಭೆ ಹಾಗೂ ಸದಸ್ಯರು ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರ ಆಯ್ಕೆ ಸಮಿತಿ ಗದಗ ಜಿಲ್ಲೆ ಇವರಿಗೆ ಸಾರ್ವಜನಿಕರ ಪ್ರಚಾರಕ್ಕಾಗಿ ಕ್ರಮವಹಿಸುವದು.
4. ಮಾನ್ಯ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಗದಗ ಹಾಗೂ ಸದಸ್ಯರು ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರ ಆಯ್ಕೆ ಸಮಿತಿ ಗದಗ ಜಿಲ್ಲೆ
5. ಮಾನ್ಯ ಉಪನಿರ್ದೇಶಕರು,ಸಮಾಜ ಕಲ್ಯಾಣ ಇಲಾಖೆ, ಗದಗ ಹಾಗೂ ಸದಸ್ಯರು ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರ ಆಯ್ಕೆ ಸಮಿತಿ ಗದಗ ಜಿಲ್ಲೆ
6. ಮಾನ್ಯ ಉಪ ನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಗದಗ ಹಾಗೂ ಸದಸ್ಯ ಕಾರ್ಯದರ್ಶಿಗಳು ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರ ಆಯ್ಕೆ ಸಮಿತಿ ಗದಗ ಜಿಲ್ಲೆ
7. ಮಾನ್ಯ ತಹಶೀಲ್ದಾರರು ರೋಣ/ಗಜೇಂದ್ರಗಡ ಹಾಗೂ ಅಧ್ಯಕ್ಷರು ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರ ಅರ್ಜಿಗಳ ಪರಿಶೀಲನಾ ಸಮಿತಿ ರೋಣ.
8. ಮಾನ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಾಲ್ಲೂಕ ಪಂಚಾಯತ ರೋಣ/ಗಜೇಂದ್ರಗಡ ಹಾಗೂ ಸದಸ್ಯರು ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರ ಅರ್ಜಿಗಳ ಪರಿಶೀಲನಾ ಸಮಿತಿ ರೋಣ.
9. ಮಾನ್ಯ ತಾಲ್ಲೂಕಾ ಸಮಾಜ ಕಲ್ಯಾಣಾಧಿಕಾರಿಗಳು, ರೋಣ/ಗಜೇಂದ್ರಗಡ ಹಾಗೂ ಸದಸ್ಯರು ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರ ಅರ್ಜಿಗಳ ಪರಿಶೀಲನಾ ಸಮಿತಿ ರೋಣ.
10. ಮಾನ್ಯ ಮುಖ್ಯ ಅಧಿಕಾರಿಗಳು ಪುರಸಭೆ/ಪಟ್ಟಣ ಪಂಚಾಯತ ರೋಣ, ಗಜೇಂದ್ರಗಡ, ನರೇಗಲ್ ಹಾಗೂ ಸದಸ್ಯರು ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರ ಅರ್ಜಿಗಳ ಪರಿಶೀಲನಾ ಸಮಿತಿ ರೋಣ.
11. ಮಾನ್ಯ ಕ್ಷೇತ್ರ ಶಿಕ್ಷಣಾಧಿಕಾರಿಗಳು ರೋಣ/ಗಜೇಂದ್ರಗಡ ಹಾಗೂ ಸದಸ್ಯರು ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರ ಅರ್ಜಿಗಳ ಪರಿಶೀಲನಾ ಸಮಿತಿ ರೋಣ.
12. ಮಾನ್ಯ ಸಹಾಯಕ ನಿರ್ದೇಶಕರು, ವಾರ್ತಾ ಮತ್ತು ಪ್ರಚಾರ ಇಲಾಖೆ ಗದಗ ಇವರಿಗೆ ಪತ್ರಿಕಾ ಪ್ರಕಟಣೆಗಾಗಿ ಕೋರಿ ಸಲ್ಲಿಸಲಾಗಿದೆ.



Scanned with CamScanner

**ತಮ್ಮ ಕಛೇರಿಯ ಸೂಚನಾ ಫಲಕಕ್ಕೆ ಸಾರ್ವಜನಿಕರ ಅವಗಾಹನೆಗಾಗಿ ಪ್ರಕಟಣೆ ಪಡಿಸಲು ವಿನಂತಿ.**

1. ಸಂಬಂಧಿಸಿದ ತಹಶಿಲ್ದಾರರು/ಕಾರ್ಯನಿರ್ವಾಹಕ ಅಧಿಕಾರಿಗಳು ತಾಲ್ಲೂಕು ಪಂಚಾಯತ/ ಸಂಬಂಧಿಸಿದ ತಾಲ್ಲೂಕಾ ಪರಿಶೀಲನಾ ಸಮಿತಿಯ ಅಧಿಕಾರಿಗಳ ಕಛೇರಿ ಹಾಗೂ ಸಂಬಂಧಿಸಿದ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಸೂಚನಾ ಫಲಕದಲ್ಲಿ ಪ್ರಕಟಿಸಲು ಮಾಹಿತಿಗಾಗಿ.
2. ಅಂಗನವಾಡಿ ಕಾರ್ಯಕರ್ತೆ/ಸಹಾಯಕಿ ಹುದ್ದೆ ಖಾಲಿ ಇರುವ ಅಂಗನವಾಡಿ ಕೇಂದ್ರಕ್ಕೆ ಪ್ರಕಟಣೆ ಪ್ರತಿ ಕಳುಹಿಸುತ್ತಾ ಅಂಗನವಾಡಿ ಕೇಂದ್ರಗಳಲ್ಲಿ ಪ್ರಕಟಿಸುವಂತೆ ಸೂಚಿಸಿದೆ.
3. ಕಛೇರಿಯ ಸೂಚನಾ ಫಲಕಕ್ಕೆ ಪ್ರಕಟಣೆಗಾಗಿ
4. ಈ ಕಛೇರಿಯ ಕಡತಕ್ಕೆ

ಸದಸ್ಯ ಕಾರ್ಯದರ್ಶಿ
ತಾಲೂಕು ಮಟ್ಟದ ಅಂ.ಕಾರ್ಯಕರ್ತೆಯರ/
ಅಂ.ಸಹಾಯಕಿಯರ ಅರ್ಜಿಗಳ ಪರಿಶೀಲನಾ ಸಮಿತಿ
ಹಾಗೂ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು
ರೋಣ



Scanned with CamScanner

## ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರನ್ನು ಆಯ್ಕೆ ಮಾಡಲು ಹೊರಡಿಸಿದ ಸರ್ಕಾರದ ಪರಿಷ್ಕೃತ ಮಾರ್ಗಸೂಚಿಗಳು.

(ಸರ್ಕಾರದಆದೇಶ ಸಂಖ್ಯೆ:ಮಮಇ 154 ಐಸಿಡಿ 2020, ಬೆಂಗಳೂರು, ದಿನಾಂಕ:03/12/2022 ಹಾಗೂ ಸರ್ಕಾರದ ಮಾರ್ಪಾಡು ಆದೇಶ ಮಮಇ/154/ಐಸಿಡಿ/2020 ದಿನಾಂಕ: 18/11/2024)

### ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರ ಆಯ್ಕೆಯ ಮಾನದಂಡಗಳು:

**I. ಅರ್ಹತೆ:**

ಮಹಿಳೆಯರು ಹಾಗೂ ಲಿಂಗತ್ವ ಅಲ್ಪಸಂಖ್ಯಾತ ಮಹಿಳೆಯರು ಮಾತ್ರ ಅರ್ಜಿ ಸಲ್ಲಿಸಲು ಅರ್ಹರಿರುತ್ತಾರೆ.

**II. ವಯೋಮಿತಿ:**

ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರ ಹುದ್ದೆಗೆ ಅರ್ಜಿ ಸಲ್ಲಿಸಲು 19-35 ವರ್ಷ ವಯೋಮಿತಿ ಹೊಂದಿರಬೇಕು. ಹೆಣ್ಣು ಮಕ್ಕಳು ಹಾಗೂ ಮಹಿಳಾ ಲಿಂಗತ್ವ ಅಲ್ಪಸಂಖ್ಯಾತರು ಮಾತ್ರ ಅರ್ಜಿ ಸಲ್ಲಿಸಬಹುದು ಹಾಗೂ ವಿಕಲಚೇತನರಿಗೆ 10 ವರ್ಷಗಳ ವಯೋಮಿತಿ ಸಡಿಲಿಕೆ ಇರುತ್ತದೆ.

**III. ಸ್ಥಳೀಯತೆ:**

1. ಗ್ರಾಮಾಂತರ ಪ್ರದೇಶದ ಅಂಗನವಾಡಿ ಕೇಂದ್ರವಾದಲ್ಲಿ ಆಯಾ ಕಂದಾಯ ಗ್ರಾಮದಲ್ಲಿ ವಾಸ್ತವ್ಯ ಹೊಂದಿರಬೇಕು. ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರ ಆಯ್ಕೆಗೆ ಸ್ಥಳೀಯ ಮಜಿರೆ, ತಾಂಡಾ ಹಾಗೂ ಹಾಡಿಗೆ ಸೇರಿದವರಾಗಿದ್ದರೆ ಸಂಬಂಧಿಸಿದ ವಾಸ್ತವ್ಯ ಪ್ರಮಾಣ ಪತ್ರವನ್ನು ಸಕ್ಷಮ ಪ್ರಾಧಿಕಾರದಿಂದ ಪಡೆಯುವುದು.
2. ನಗರ ಪ್ರದೇಶದ ಅಂಗನವಾಡಿ ಕೇಂದ್ರವಾದಲ್ಲಿ ಆಯಾ ಕಂದಾಯ ವಾರ್ಡನಲ್ಲಿ ವಾಸ್ತವ್ಯ ಹೊಂದಿರಬೇಕು ಹಾಗೂ ವಾಸ್ತವ್ಯ ಪ್ರಮಾಣ ಪತ್ರವನ್ನು ಸಕ್ಷಮ ಪ್ರಾಧಿಕಾರದಿಂದ ಪಡೆದಿರಬೇಕು. (ಚುನಾವಣಾ ವಾರ್ಡಗಳನ್ನು ಪರಿಗಣಿಸುವಂತಿಲ್ಲ)
3. ತಹಶೀಲ್ದಾರ್/ಉಪ ತಹಶೀಲ್ದಾರ್‌ರವರ ಮೂರು ವರ್ಷದ ವಾಸ್ತವ್ಯ ದೃಢೀಕರಣದೊಂದಿಗೆ ಸ್ಥಳೀಯರು ಎಂಬುದನ್ನು ದೃಢೀಕರಿಸಲು ಪೂರಕ ದಾಖಲೆಗಳಾಗಿ ಆಧಾರಕಾರ್ಡ, ರೇಷನ್ ಕಾರ್ಡ ಮತದಾರರಗುರುತಿನ ಚೀಟಿಗಳನ್ನು ಪಡೆಯುವುದು. ಮಜಿರೆ, ತಾಂಡಾ ಹಾಗೂ ಹಾಡಿಗೆ ಸೇರಿದವರಾಗಿದ್ದರೆ ಸಂಬಂಧಿಸಿದ ವಾಸ್ತವ್ಯ ಪ್ರಮಾಣ ಪತ್ರ ಪಡೆಯುವುದು.

**IV. ಅಂಗನವಾಡಿ ಕಾರ್ಯಕರ್ತೆ ಹುದ್ದೆಗೆ ವಿದ್ಯಾರ್ಹತೆ:**

1. ಕನಿಷ್ಠ P.U.C. ತೇರ್ಗಡೆ ಹೊಂದಿರಬೇಕು. S.S.L.C. ಯಲ್ಲಿ ಕನ್ನಡ ಭಾಷೆಯನ್ನು ಪ್ರಥಮ ಅಥವಾ ದ್ವಿತೀಯ ಭಾಷೆಯನ್ನಾಗಿ ಓದಿರಬೇಕು.
2. ಅಂಗನವಾಡಿ ಕಾರ್ಯಕರ್ತೆಯರ ನೇಮಕಾತಿ ಸಂದರ್ಭದಲ್ಲಿ "ಸರ್ಕಾರದಅಂಗೀಕೃತ ಸಂಸ್ಥೆಗಳಿಂದ D.S.E.R.T. ಯಿಂದ ECCE ಡಿಪ್ಲೊಮಾ ಕೋರ್ಸ, JOC ಕೋರ್ಸ, N.T.T ಕೋರ್ಸ್‌ಗಳನ್ನು ಹಾಗೂ ಅಂಗನವಾಡಿ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಡಿಪ್ಲೊಮಾ ನ್ಯೂಟ್ರಿಷಿಯನ್, ಹೋಂ ಸೈನ್ಸ್ ಸರ್ಟಿಫಿಕೇಟ್ ಕೋರ್ಸ್, ಒಂದು ವರ್ಷದ ನರ್ಸರಿ ಅಥವಾ ಪೂರ್ವ ಪ್ರಾಥಮಿಕ ತರಬೇತಿ ಪಡೆದು ಪ್ರಮಾಣ ಪತ್ರ ಹೊಂದಿದವರಿಗೆ ಮೊದಲ ಆದ್ಯತೆ ನೀಡುವುದು ಹಾಗೂ ಸದರಿಯವರಿಗೆ ಬೋನಸ್ +5 ಅಂಕಗಳನ್ನು ನೀಡುವುದು.

**V. ಅಂಗನವಾಡಿ ಸಹಾಯಕಿ ವಿದ್ಯಾರ್ಹತೆ:** ಹುದ್ದೆಗೆ ಕನಿಷ್ಠ ವಿದ್ಯಾರ್ಹತೆ SSLC ಅಥವಾ ತತ್ಸಮಾನ ತರಗತಿಯಲ್ಲಿ ಉತ್ತೀರ್ಣವಾಗಿರಬೇಕು.

ಅ) ಕರ್ನಾಟಕ ರಾಜ್ಯ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ ಮುಕ್ತ ಶಾಲೆ/ಮುಕ್ತ ವಿದ್ಯಾಲಯಗಳಲ್ಲಿ S.S.L.C. ತೇರ್ಗಡೆ ಹೊಂದಿದ ಅಭ್ಯರ್ಥಿಗಳು ಪ್ರಥಮ/ದ್ವಿತೀಯ ಭಾಷೆಯಾಗಿ ಕನ್ನಡ ಹಾಗೂ ಸಾಮಾನ್ಯ ಗಣಿತ ಮತ್ತು ಸಮಾಜ ಶಾಸ್ತ್ರ/ಸಮಾಜ ವಿಜ್ಞಾನ



Scanned with CamScanner

ವಿಷಯಗಳನ್ನು ಕಡ್ಡಾಯವಾಗಿ ವ್ಯಾಸಂಗ ಮಾಡಿದ್ದು ಪ್ರಮಾಣ ಪತ್ರ/ಅಂಕಪಟ್ಟಿಯು ಗರಿಷ್ಠ 625 ಕನಿಷ್ಠ 219 ಅಂಕಗಳನ್ನು ಹೊಂದಿದ್ದಲ್ಲಿ ಅಂತಹ ಅಭ್ಯರ್ಥಿಗಳನ್ನು ಪರಿಗಣಿಸತಕ್ಕದ್ದು.

ಆ) ಬೇರೆ ರಾಜ್ಯಗಳಲ್ಲಿ ವ್ಯಾಸಂಗ ಮಾಡಿದ್ದು, ಕನ್ನಡವನ್ನು ಪ್ರಥಮ/ದ್ವಿತೀಯ ಭಾಷೆಯಾಗಿಅಭ್ಯಾಸ ಮಾಡಿದ್ದರೂ SSLC ಪರೀಕ್ಷೆಗೆ ಆ ರಾಜ್ಯದಲ್ಲಿ ನಿಗದಿಪಡಿಸಿದ ಗರಿಷ್ಠ ಹಾಗೂ ಕನಿಷ್ಠ ಅಂಕಗಳು ಹಾಗೂ ಕರ್ನಾಟಕ ರಾಜ್ಯದಲ್ಲಿ ನಿಗದಿಪಡಿಸಿದ ಗರಿಷ್ಠ ಹಾಗೂ ಕನಿಷ್ಠ ಅಂಕದಲ್ಲಿ ವ್ಯತ್ಯಾಸದ್ದಲ್ಲಿ ಕರ್ನಾಟಕದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿಗಳನ್ನು ಮಾತ್ರ ಪರಿಗಣಿಸತಕ್ಕದ್ದು.

ಇ) ಅಂಗನವಾಡಿ ಸಹಾಯಕಿಯರು ಯಾವುದೇ ಭಾಷಾ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ್ದರೂ ಹಾಗೂ ಯಾವುದೇ ರಾಜ್ಯದಲ್ಲಿ ವ್ಯಾಸಂಗ ಮಾಡಿದ್ದರೂ ಸಹಾ ಅವರು ಕನ್ನಡ ಭಾಷೆಯನ್ನು ಪ್ರಥಮ/ದ್ವಿತೀಯ ಭಾಷೆಯಾಗಿ ವ್ಯಾಸಂಗ ಮಾಡಿರಬೇಕು. ಹಾಗೂ ಮಾತೃ ಭಾಷೆ ಕನ್ನಡವಲ್ಲದೇ ಇರುವ ಅಭ್ಯರ್ಥಿಗಳಿಗೆ ಆಯ್ಕೆ ಸಮಿತಿಯು ಆಯ್ಕೆ ಸಮಯದಲ್ಲಿ ಸಂದರ್ಶನ ಏರ್ಪಡಿಸಿ ಹಾಗೂ ಅವಶ್ಯವಿದ್ದಲ್ಲಿ ಕನ್ನಡ ಭಾಷೆಯ ಜ್ಞಾನದ ಕುರಿತಂತೆ ಓದಿಸಿ, ಬರೆಸಿ ಅವರ ಕನ್ನಡ ಭಾಷಾ ಜ್ಞಾನವನ್ನು ಪರೀಕ್ಷಿಸಿ ಅವರನ್ನುಆಯ್ಕೆ ಮಾಡುವ ಬಗ್ಗೆ ಸಮಿತಿಯವರು ನಿರ್ಧರಿಸುವುದು.

**VIII. ಆಯ್ಕೆ ಆದ್ಯತೆ:**

1. **ಆಸಿಡ್ ದಾಳಿಗೆ ತುತ್ತಾದ ಮಹಿಳೆಯರ ಆಯ್ಕೆ:**
   ಆಸಿಡ್ ದಾಳಿಗೆ ತುತ್ತಾದ ಮಹಿಳೆಯರು ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರ ಹುದ್ದೆಗೆ ಅರ್ಜಿ ಸಲ್ಲಿಸಿದ್ದಲ್ಲಿ ಅರ್ಹ ಅಭ್ಯರ್ಥಿಗೆ +5 ಬೋನಸ್ ಅಂಕಗಳನ್ನು ನೀಡುವುದು.
2. **ಇಲಾಖೆಯ ಸಂಸ್ಥೆಗಳ ನಿವಾಸಿಗಳ ಆಯ್ಕೆ:**
   ಇಲಾಖೆಯ ಸುಧಾರಣಾ ಸಂಸ್ಥೆ / ರಾಜ್ಯ ಮಹಿಳಾ ನಿಲಯಗಳ ನಿವಾಸಿಗಳು ಕನಿಷ್ಠ 3 ವರ್ಷ ಸಂಸ್ಥೆಯಲ್ಲಿರಬೇಕು ಹಾಗೂ ಈ ಬಗ್ಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳಿಂದ ಪಡೆದ ನಿವಾಸಿ ಪ್ರಮಾಣ ಪತ್ರ ನೇಮಕಾತಿ ಪ್ರಕ್ರಿಯೆಯಲ್ಲಿ ನಿಗದಿಪಡಿಸಿದ ವಿದ್ಯಾರ್ಹತೆಯಲ್ಲಿ ಗಳಿಸಿದ ಅಂಕಗಳಿಗೆ +10 ಬೋನಸ್ ಅಂಕಗಳನ್ನು ನೀಡುವುದು. ವಾಸಸ್ಥಳ ದೃಢೀಕರಣವನ್ನು ಸಲ್ಲಿಸಿರುವ ಆ ಜಿಲ್ಲೆಯಲ್ಲಿ ಎಲ್ಲಿಯಾದರೂ ಅರ್ಜಿ ಸಲ್ಲಿಸಬಹುದಾಗಿರುತ್ತದೆ.
3. **ವಿಧವೆಯರಆಯ್ಕೆ:** ಅಂಗನವಾಡಿ ಕಾರ್ಯಕರ್ತೆ/ಸಹಾಯಕಿರ ಹುದ್ದೆಗಳಿಗೆ ವಿಧವೆಯರು ಅರ್ಜಿ ಸಲ್ಲಿಸಿದಾಗ ಆಸಿಡ್ ದಾಳಿಗೆ ಒಳಗಾದವರು ಮತ್ತು ಇಲಾಖಾ ಸಂಸ್ಥೆಯ ನಿವಾಸಿಗಳನ್ನು ಹೊರತುಪಡಿಸಿ, ಇತರ ಎಲ್ಲಾ ಸ್ವೀಕೃತ ಅರ್ಜಿಗಳನ್ನು ಪರಿಣಿಸದೇ ಮೂರನೇ ಆದ್ಯತೆಯ ಮೇರೆಗೆ ನೇರವಾಗಿ ವಿಧವೆಯರನ್ನೇ ಆಯ್ಕೆ ಮಾಡತಕ್ಕದ್ದು. **ಅರ್ಜಿ ಸಲ್ಲಿಸಿದ ನಂತರ ವಿಧವೆಯಾದಲ್ಲಿ ಪರಿಗಣಿಸುವಂತಿಲ್ಲ.**

- ವಿಧವೆಯರಲ್ಲಿ ಆತ್ಮಹತ್ಯ ಮಾಡಿಕೊಂಡ ರೈತರ ಪತ್ನಿಗೆ (ವಿಧವೆಗೆ) ಪ್ರಥಮ ಆದ್ಯತೆ ನೀಡತಕ್ಕದ್ದು,
- ವಿಧವೆಯರು ತಾವು ಪ್ರಸ್ತುತ ಎಲ್ಲಿ ವಾಸವಾಗಿರುವುದಾಗಿ ವಾಸಸ್ಥಳ ದೃಢೀಕರಣವನ್ನು ಸಲ್ಲಿಸಿರುತ್ತಾರೆ ಆ ಸ್ಥಳವನ್ನೆ ಅವರ ವಾಸಸ್ಥಳವೆಂದು ಪರಿಗಣಿಸತಕ್ಕದ್ದು.
- ಒಂದೇ ಹುದ್ದೆಗೆ ಇಬ್ಬರು ವಿಧವೆಯರು ಅರ್ಜಿ ಸಲ್ಲಿಸಿದ್ದಲ್ಲಿ ಗರಿಷ್ಠ ಅಂಕ ಪಡೆದವರುನ್ನು ಆಯ್ಕೆ ಮಾಡಬಹುದಾಗಿದೆ.
- ವಿಧವೆಯರು ಪತಿಯ ಮರಣ ಪ್ರಮಾಣ ಪತ್ರ ಅಥವಾ ವಿಧವಾ ಪ್ರಮಾಣ ಪತ್ರಗಳನ್ನು ಕಡ್ಡಾಯವಾಗಿ ಲಗತ್ತಿಸುವುದು.

4. **ಅಂಗವಿಕಲರಆಯ್ಕೆ:**

- ದೈಹಿಕಅಂಗವಿಕಲತೆಯ ಪ್ರಮಾಣವನ್ನು ಶೇ.40ಕ್ಕಿಂತ ಹೆಚ್ಚಿರದ ಹಾಗೆ ನಿಗದಿಪಡಿಸುವುದು. ವಿದ್ಯಾರ್ಹತೆಯಲ್ಲಿ ಗಳಿಸಿದ ಅಂಕಗಳಿಗೆ +5 ಬೋನಸ್ ಅಂಕಗಳನ್ನು ನೀಡುವುದು. ಅಂಗವಿಕಲರು ಪ್ರಸ್ತುತ ತಾವು ಎಲ್ಲಿ ವಾಸವಾಗಿರುವುದಾಗಿ ವಾಸಸ್ಥಳ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತಾರೋ ಆ ಸ್ಥಳವನ್ನೇ ಅವರ ವಾಸಸ್ಥಳವೆಂದು ಪರಿಗಣಿಸತಕ್ಕದ್ದು.



Scanned with CamScanner

ಹಾಜರಾಗಲು ಸೂಚಿಸಿ ಸದರಿ ಹುದ್ದೆ ನಿರ್ವಹಿಸಲು ಸಮರ್ಥರಿರುವ ಬಗ್ಗೆ ಸಮಿತಿಯೇ ಪರಿಶೀಲಿಸಿ ನಿರ್ಧರಿಸತಕ್ಕದ್ದು.

IX. **ಬೋನಸ್ ಅಂಕಗಳು: (ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರಿಗೆ)**
ಅಂಗನವಾಡಿ ಕಾರ್ಯಕರ್ತೆ / ಸಹಾಯಕಿ ಹುದ್ದೆಗೆಅರ್ಜಿ ಸಲ್ಲಿಸಿದವರಲ್ಲಿ ಒಂದಕ್ಕಿಂತ ಹೆಚ್ಚು ಅಭ್ಯರ್ಥಿಗಳು ಸಮಾನ ಅಂಕ ಗಳಿಸಿದ್ದಲ್ಲಿ ವಯೋಹಿರಿತನವನ್ನು ಪರಿಗಣಿಸಬೇಕು. ವಯಸ್ಸು ಸಮಾನವಾಗಿದ್ದಲ್ಲಿ ವಿಧವೆ / ವಿಚ್ಛೇದಿತೆಯರನ್ನು ಪರಿಗಣಿಸಬೇಕು. ಮಾಜಿ ದೇವದಾಸಿಯ ಮಗಳು, ಯೋಜನಾ ನಿರಾಶ್ರಿತರು, ವಿಚ್ಛೇದಿತ ಮಹಿಳೆಯರು ಇವರುಗಳಿಗೆ +5 ಬೋನಸ್ ಅಂಕಗಳನ್ನು ನಿಗದಿಪಡಿಸುವುದು.(ಅಧಿಕೃತ ಪ್ರಮಾಣಪತ್ರ ನೀಡುವ ಷರತ್ತಿಗೊಳಪಟ್ಟು.)

X. **ಆಫ್ ಲೈನ್ ಅರ್ಜಿಯೊಂದಿಗೆ ಲಗತ್ತಿಸ ಬೇಕಾದ:**

1. ನಿಗಧಿತ ಅರ್ಜಿ ನಮೂನೆ.
2. ಜನನ ಪ್ರಮಾಣ ಪತ್ರ/ಜನ್ಮ ದಿನಾಂಕ ಇರುವ S.S.L.C. ಅಂಕಪಟ್ಟಿ
3. ನಿಗದಿತ ವಿದ್ಯಾರ್ಹತೆಯ ಅಂಕಪಟ್ಟಿ
4. ತಹಶೀಲ್ದಾರರು/ಉಪ ತಹಶೀಲ್ದಾರರಿಂದ ಪಡೆದ ಮೂರು (3) ವರ್ಷದೊಳಗಿನ ವಾಸಸ್ಥಳ ದೃಢೀಕರಣ ಪತ್ರ.
5. ಅಭ್ಯರ್ಥಿಗಳ ಜಾತಿ ಪ್ರಮಾಣ ಪತ್ರ.
6. ಪತಿಯ ಮರಣ ಪ್ರಮಾಣ ಪತ್ರ ಹಾಗೂ ವಿಧವಾ ಪ್ರಮಾಣ ಪತ್ರ (ವಿಧವಾ ವೇತನದ ದೃಢೀಕರಣವನ್ನು ಪರಿಗಣಿಸುವಂತಿಲ್ಲ).
7. ಅಂಗವಿಕಲತೆ ಪ್ರಮಾಣ ಪತ್ರ (ಅಂಗವಿಕಲ ವೇತನದ ದೃಢೀಕರಣವನ್ನು ಪರಿಗಣಿಸುವಂತಿಲ್ಲ).
8. ವಿಚ್ಛೇದನ ಪ್ರಮಾಣ ಪತ್ರ (ನ್ಯಾಯಾಲಯದಿಂದ ಪಡೆದಿರಬೇಕು).
9. ಕರ್ನಾಟಕರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ವತಿಯಿಂದ ನಡೆಸಲ್ಪಟ್ಟ ಮಾಜಿ ದೇವದಾಸಿಯರ ಸಮೀಕ್ಷೆಯ ಪಟ್ಟಿಯಲ್ಲಿರುವ ಮಾಜಿ ದೇವದಾಸಿಯರ ಮಕ್ಕಳು ಎಂಬುದರ ಬಗ್ಗೆ ಮಹಿಳಾ ಅಭಿವೃದ್ಧಿ ನಿಗಮದ ಅಧಿಕಾರಿಗಳಿಂದ ಪಡೆದ ಪ್ರಮಾಣ ಪತ್ರ.
10. ಇಲಾಖೆಯ ಸುಧಾರಣಾ ಸಂಸ್ಥೆ / ರಾಜ್ಯ ಮಹಿಳಾ ನಿಲಯಗಳ ನಿವಾಸಿಗಳು ಕನಿಷ್ಟ 3 ವರ್ಷ ಸಂಸ್ಥೆಯಲ್ಲಿರಬೇಕು. ಹಾಗೂ ಈ ಬಗ್ಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳಿಂದ ಪಡೆದ ನಿವಾಸಿ ಪ್ರಮಾಣ ಪತ್ರ.
11. ಯೋಜನಾ ನಿರಾಶ್ರಿತರ ಬಗ್ಗೆ ತಹಶೀಲ್ದಾರರಿಂದ ಪಡೆದ ಪ್ರಮಾಣ ಪತ್ರ.
12. ಆಧಾರ್ ಕಾರ್ಡ್ /ಮತದಾರರ ಗುರುತಿನ ಚೀಟಿ/ರೇಷನ್ ಕಾರ್ಡ್, ದೃಢೀಕರಿಸಿ ಪತ್ರ ಲಗತ್ತಿಸುವುದು.
13. ಎಲ್ಲಾ ದಾಖಲಾತಿಗಳನ್ನು ಪತ್ರಾಂಕಿತ/ಗೆಜೆಟೆಡ್ ಅಧಿಕಾರಿಗಳಿಂದ ದೃಢೀಕರಣ ಮಾಡಿಸಿ ಸಲ್ಲಿಸುವುದು.

ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಹಾಗೂ
ಸದಸ್ಯ ಕಾರ್ಯದರ್ಶಿಗಳು ಅಂಗನವಾಡಿ ಕಾರ್ಯಕರ್ತೆ/
ಅಂಗನವಾಡಿ ಸಹಾಯಕಿಯರ ಅರ್ಜಿಗಳ ತಾಲೂಕ
ಮಟ್ಟದ ಪರಿಶೀಲನಾ ಸಮಿತಿ, ರೋಣ



Scanned with CamScanner